## ಗ್ಯಾಸ್ ಸಮಸ್ಯೆ

ಸ್ವಲ್ಪ ವಯಸ್ಸಾದ ಮಹಿಳೆ ವೈದ್ಯರ ಬಳಿ ಹೋಗಿ, 'ಡಾಕ್ಟರ್, ನನಗೆ ಗ್ಯಾಸ್ ಸಮಸ್ಯೆ ಇದೆ, ಆದರೆ ಇದು ವಾಸನೆಯೂ ಇರುವುದಿಲ್ಲ, ಶಬ್ದವೂ ಇರುವುದಿಲ್ಲ. ನಾನು ಕ್ಲಿನಿಕ್‌ಗೆ ಬಂದ ನಂತರ ಕನಿಷ್ಠ 20 ಬಾರಿ ಗ್ಯಾಸ್ ಬಿಟ್ಟಿದ್ದೇನೆ. ನಿಮಗೆ ಗೊತ್ತೇ ಆಗಿಲ್ಲವಲ್ಲ?' ಎಂದಳು. ವೈದ್ಯರು ಮೌನವಾಗಿ ಒಂದಷ್ಟು ಮಾತ್ರೆಗಳನ್ನು ಕೊಟ್ಟು, ಮುಂದಿನ ವಾರ ಬರಲು ಹೇಳಿದರು. ಒಂದು ವಾರ ಬಿಟ್ಟು ಆ ಮಹಿಳೆ ಮತ್ತೆ ವೈದ್ಯರ ಬಳಿ ಬಂದಳು. 'ಡಾಕ್ಟರ್, ನೀವು ನನಗೆ ಅದೇನು ಮಾತ್ರೆ ಕೊಟ್ಟಿದ್ದೀರೊ ಗೊತ್ತಿಲ್ಲ. ನನ್ನ ಗ್ಯಾಸ್ ಗಬ್ಬು ವಾಸನೆ ಬರುತ್ತಿದೆ. ಆದರೆ ಶಬ್ದವಾಗುತ್ತಿಲ್ಲ ಅಷ್ಟೆ' ಎಂದಳು. ವೈದ್ಯರು ಹೇಳಿದರು, 'ಒಳ್ಳೆಯದು, ಅಂದರೆ ನಿಮ್ಮ ಸೈನಸ್ ಸಮಸ್ಯೆ ಬಗೆಹರಿದಿದೆ. ನಿಮಗೀಗ ವಾಸನೆ ಗ್ರಹಿಸಲು ಸಾಧ್ಯವಾಗುತ್ತಿದೆ. ಇನ್ನು ನಾವು ನಿಮ್ಮ ಶ್ರವಣ ಸಮಸ್ಯೆಗೆ ಚಿಕಿತ್ಸೆ ನೀಡೋಣ'.

**ಅನುಪಮಾ ವಸ್ತ್ರದ**



---



ಕಲೆ: ಗಣೇಶ ಆಚಾರ್ಯ

## ವೈದ್ಯರು ಏನು ಹೇಳಿದರು?

ಮಧ್ಯವಯಸ್ಸಿನ ದಂಪತಿ ತಪಾಸಣೆಗಾಗಿ ಆಸ್ಪತ್ರೆಗೆ ಬಂದಿದ್ದರು. ಪತಿಯನ್ನು ಪರೀಕ್ಷಿಸಿದ ವೈದ್ಯರು ಆತನ ಪತ್ನಿಯನ್ನು ಮಾತ್ರವೇ ಒಳಗೆ ಕರೆದು, 'ನೋಡಿ, ನಿಮ್ಮ ಗಂಡನಿಗೆ ಅಂತಹ ಯಾವುದೇ ಆರೋಗ್ಯ ಸಮಸ್ಯೆಗಳಿಲ್ಲ. ನೀವು ಅವರಿಗೆ ತಿನ್ನುವುದಕ್ಕೆ–ಉಣ್ಣುವುದಕ್ಕೆ ತಡೆಯೊಡ್ಡಬೇಡಿ. ಅವರು ಟೀವಿಯಲ್ಲಿ ತಮ್ಮಿಷ್ಟದ ಕ್ರೀಡೆಗಳನ್ನು ನೋಡಲಿ, ಹಾಗೆಯೇ ಎರಡು ಹೊತ್ತು ಕಾಫಿ ಮಾಡಿಕೊಡಿ. ಸ್ನೇಹಿತರೊಂದಿಗೆ ಫೋನಿನಲ್ಲಿ ಹರಟಲಿ. ಎಲ್ಲದಕ್ಕೂ ಅವರನ್ನು ದೂರಬೇಡಿ. ಇಷ್ಟು ಮಾಡಿದರೆ ಬಹುಶಃ ಅವರು ಇನ್ನೂ 20 ವರ್ಷ ಬದುಕುತ್ತಾರೆ' ಎಂದರು. ಪತ್ನಿ ಮೌನವಾಗಿ ಎದ್ದು ಹೊರಗೆ ಬಂದಳು. ಪತಿ, 'ವೈದ್ಯರು ಏನಂತ ಹೇಳಿದರು?' ಎಂದು ಕೇಳಿದ. 'ರೀ, ನಡಿರಿ, ನೀವು ಇನ್ನು ಹೆಚ್ಚು ದಿನ ಬದುಕಲ್ಲ ಅಂತ ಹೇಳಿದರು' ಎಂದಳು.

**ಜ್ಯೋತಿ ಪರಬತ್**